# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು, ಶಹಾಬಾದ

**CC.No. 100/2025**

ಕರ್ನಾಟಕ ಸರ್ಕಾರ

........ಫಿರ್ಯಾದಿದಾರ

- ವಿರುದ್ಧ -

ಮಲ್ಲಿಕಾರ್ಜುನ ತಂದೆ ಬಸರಾಜ ಪಗಲಾಪುರ
ವ: 40 ವರ್ಷ; ಉ: ಕೂಲಿ, ಸಾ: ಶಹಾಬಾದ
ಶಹಾಬಾದ, ಜಿ: ಕಲಬುರಗಿ

.........ಆರೋಪಿತ

ನಾನು ಚಟ್ನಿ ಪ್ರಶಾಂತ ಶರಣಬಸವೇಶ್ವರ ಬಿ.ಎ, ಎಲ್ಎಲ್.ಬಿ.(ಆನರ್ಸ),ಎಲ್.ಎಲ್.ಎಂ, ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು, ಶಹಾಬಾದ ಇವರಿಂದ ಈ ಕೆಳಗಿನಂತೆ ನೀನು ಆಪಾದನೆಗೆ ಒಳ್ಳಪಡುತ್ತೀರಿ.

## <u>ದೋಷಾರೋಪಣೆ</u>

ದಿ: 06/04/2024 ರಂದು ರಾತ್ರಿ 9 ಗಂಟೆ ಸುಮಾರಿಗೆ ಅಬಕಾರಿ ಪೋಲೀಸರ ಭಾತ್ಮಿಯ ಮೇರೆಗೆ ರಸ್ತೆಗಾವಲು ಮಾಡುತ್ತಿರುವಾಗ ಚಿತ್ತಾಪುರ ಉಪ ವಲಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ತರನಳ್ಳಿ ಗ್ರಾಮದ ಸಾರ್ವಜನಿಕ ರಸ್ತೆಯ ಕ್ರಾಸಿನ ಬಳಿ ಆರೋಪಿತನಾದ ನೀನು ನಿನ್ನ ದ್ವಿಚಕ್ರ ವಾಹನದ ಮೇಲೆ ಎರಡು ಪ್ಲಾಸ್ಟಿಕ ಚೀಲಗಳಲ್ಲಿ ಮದ್ಯವನ್ನು ಇಟ್ಟುಕೊಂಡು ಬರುತ್ತಿದ್ದು, ಸದರಿ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 1) 90 ಎಮ್.ಎಲ್ ಅಳತೆಯುಳ್ಳ ಒರಿಜಿನಲ್ ಚಾಯ್ಸ ವಿಸ್ಕಿಯ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 96 ಮದ್ಯದ ಟೆಟ್ರಾ ಪಾಕೆಟಗಳು, 2) 180 ಎಮ್.ಎಲ್ ಅಳತೆಯುಳ್ಳ ಬ್ಯಾಗ ಪೈಪರ್ ವಿಸ್ಕಿಯ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 48 ಮದ್ಯದ ಟೆಟ್ರಾ ಪಾಕೆಟಗಳು, 3) 660 ಎಮ್.ಎಲ್ ಅಳತೆಯುಳ್ಳ ಕಿಂಗಫಿಷರ್ ಸ್ಟ್ರಾಂಗ ಬಿಯರ್ ಎರಡು ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು 24 ಬಾಟಲಿಗಳು, 4) 660 ಎಮ್.ಎಲ್ ಅಳತೆಯುಳ್ಳ ಪವರಕೂಲ ಬಿಯರ್ ಎರಡು ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು 24 ಬಾಟಲಿಗಳು ಹಾಗೂ 5) 330 ಎಮ್.ಎಲ್ ಅಳತೆಯುಳ್ಳ ಕಿಂಗಫಿಷರ್ ಸ್ಟ್ರಾಂಗ ಬಿಯರ್ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಒಟ್ಟು 24 ಟಿನ ಬಾಟಲಿಗಳು ಅಂದಾಜು ಎಲ್ಲಾ ಮದ್ಯವು 17.280 ಲೀಟರ ಅಳತೆ ಹೊಂದಿದ್ದು ಹಾಗೂ 32.120 ಬಿಯರಗಳು ನಿನ್ನ ತಾಬೆಯಲ್ಲಿ ದೊರೆತಿದ್ದು ಇರುತ್ತದೆ, ಸದರಿ ದೊರೆತ ಮದ್ಯೆಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಹೋಗಿತ್ತಿದ್ದು ಹಾಗೂ ಸದರಿ ಮದ್ಯೆಗಳನ್ನು ಯಾವುದೇ ಸರ್ಕಾರದಿಂದ ಯೋಗ್ಯ ಪರವಾನಗಿಯನ್ನು ಪಡೆಯದೇ ಸಾಗಾಣಿಕೆ ಮಾಡುತ್ತಿರುವ ಕಾರಣ ಆರೋಪಿತನಾದ ನೀನು ಕರ್ನಾಟಕ ಅಬಕಾರಿ ಕಾಯ್ದೆ 32 ಹಾಗೂ 38 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದು ಇರುತ್ತದೆ.

ಸದರಿ ಅಪರಾಧಗಳು ನಮ್ಮ ನ್ಯಾಯಾಲಯದ ಸಂಜ್ಞೆಯಲ್ಲಿ ಬರುವುದರಿಂದ ನಿಮ್ಮನ್ನು ವಿಚಾರಣೆಗೆ ಒಳಪಡಿಸುತ್ತೇನೆ ಅಂತಾ ತಿಳಿಯಪಡಿಸುತ್ತೇನೆ.

ಪ್ರಶ್ನೆಃ ಈ ಮೇಲಿನ ಅಪರಾಧದ ಸಾರಾಂಶ ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ಈ ಮೇಲಿನ ದೋಷರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೊ?

ಉತ್ತರಃ

(ಆರೋಪಿಗೆ ದೋಷರೋಪಣೆಯ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಕೊಟ್ಟ ಉತ್ತರವನ್ನು ನಮೂದಿಸಿಕೊಳ್ಳಲಾಗಿದೆ .)

ಓ. ಹೇ. ಕೇ. ಸರಿ ಅದೆ.

Sd/-

ದಿನಾಂಕಃ 24/11/2025

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು, ಶಹಾಬಾದ